**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ. ಎಮ್. ಎಫ್. ಸಿ, ನ್ಯಾಯಾಲಯ ಅಥಣಿ.**

ಸಿ.ಸಿ. ನಂ. : 308/2016 ದಿನಾಂಕಃ 30-01-2024
ಸಿ ಡಬ್ಲೂ : 5
ಪಿ ಡಬ್ಲೂ : 4

-------------------------------------------------------------------------------

**:ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು:**

| | |
|---|---|
| ಸಾಕ್ಷಿದಾರನ ಹೆಸರು | ವಾಸುದೇವ ಶಂಕರ ಕಾಂಬಳೆ |
| ಗಂಡ/ ತಂದೆಯ ಹೆಸರು | ಶಂಕರ |
| ವಯಸ್ಸು | 63 ವರ್ಷ |
| ಉದ್ಯೋಗ | ನಿವೃತ್ತ ಅಬಕಾರಿ ಉಪನಿರೀಕ್ಷಕರು |
| ವಾಸಸ್ಥಳ | ಸಾಃ ಅಥಣಿ |

<u>ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ವಕೀಲರಿಂದಃ</u>

ನಾನು 2012 ರಿಂದ 2016 ರವರೆಗೆ ಅಬಕಾರಿ ಉಪನಿರೀಕ್ಷಕರು ಎಂದು ಅಥಣಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 26.09.2015 ರಂದು ನಾನು ಎಸಹೆಚಟಿ ಕರ್ತವ್ಯದಲ್ಲಿದ್ದಾಗ ಸಂಜೆ 04.00 ಗೆ ಪ್ರಕರಣದ ಆರೋಪಿತನಾದ ಮಾಹರಾಷ್ಟ್ರದ ದೇಸಿ ಸಾಂತ್ರಾ ಸಾರಾಯಿ ಬಾಟಲಿಯಲ್ಲಿ ಅಕ್ರಮವಾಗಿ ಸಾರಾಯಿ ಮಾರಾಟ ಮಾಡುತ್ತಿರುವ ಬಾತ್ಮಿ ಬಂದಿರುತ್ತದೆ. ಚಾಸಾ-1 ರಿಂದ 3 ರವರು ನನ್ನ ಜೋತಿ ಕರೆದುಕೊಂಡು ಸಂಬರಗಿ ಗ್ರಾಮದ ಬಸನಿಲ್ದಾಣಕ್ಕೆ ನಮ್ಮ ಸರ್ಕಾರಿ ವಾಹನ ಕೆಎ-22/ಜಿ -457 ರಲ್ಲಿ ಹೋಗಿರುತ್ತೇವೆ. ನಾವು ಹೊಗಿದ ತಕ್ಷಣ ಆರೋಪಿತರು ಕೈಚೀಲವನ್ನು ಅಲ್ಲೇ ಬಿಟ್ಟು ಓಡಿ ಹೋಗಿರುತ್ತಾರೆ. ಅವನನ್ನು ಹಿಡಿದು ಹಿಡಿಯಲು ಪ್ರಯತ್ನಿಸಿದರೂ ಸಿಕ್ಕಿರುವುದಿಲ್ಲ. ಆಗ ಆರೋಪಿತನು ಬಿಟ್ಟು ಹೋದ ಕೈಚೀಲವನ್ನು ಪರಿಶೀಲಿಸಲು ಶೋಧನಾ ವಾಂರಂಟನ್ನು ತಯಾರು ಮಾಡಿರುತ್ತೇನೆ. ಸದರಿ ಕೈಚೀಲದಲ್ಲಿ 180 ಎಮಎಲನ 28 ಬಾಟಲಿಗಳು ಇದ್ದವು, ಅವುಗಳ ಪೈಕಿ ಒಂದು ಬಾಟಲಿಯನ್ನು ಸ್ಯಾಂಪಲಗಾಗಿ ಕಾಯ್ದಿರಿಸಿ ಉಳಿದವುಗಳನ್ನು ಪಂಚರ ಸಮಕ್ಷಮ ಪಂಚನಾಮೆಅಡಿ ಜಪ್ತು ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಂಜೆ 4.45 -5.45 ಗಂಟೆವರೆಗೆ ಜರುಗಿಸಿರುತ್ತೇನೆ. ಆ ನಂತರ ಠಾಣೆಗೆ ವಾಪಸ್ಸು ಬಂದು ಪಂಚನಾಮೆಯೊಂದಿಗೆ ಆರೋಪಿತನ ವಿರುದ್ಧ ದೂರನ್ನು ಸಲ್ಲಿಸಿರುತ್ತೇನೆ. ನಾನು ತಯಾರು ಮಾಡಿದ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದೆ.

ಅದರಲ್ಲಿರುವ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ನಾನು ನೀಡಿದ ಪಿರ್ಯಾದಿಯನ್ನು ನಿಪಿ-4 ಎಂದು, ಅದರಲ್ಲಿರುವ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಅಬಕಾರಿ ಇಲಾಖೆಯವರಿಗೆ ನಾನು ಸಲ್ಲಿಸಿದ ಪ್ರ ವ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಮಾನ್ಯ ಡೆಪ್ಯೂಟಿ ಕಮೀಷನರರವರಿಗೆ ಕಲಂ 43 ರಲ್ಲಿ ಸಲ್ಲಿಸಿದ ವರದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-6 ಎಂದು, ಅದರಲ್ಲಿರುವ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಚಾಸಾ-6 ರವರಿಗೆ ಹಸ್ತಾಂತರಿಸಿರುತ್ತೇನೆ. ಆ ಬಗ್ಗೆ ನಾನು ಸ್ವೀಕೃತಿ ಪಡೆದಿದ್ದ ಅದನ್ನು ನಿಪಿ-7 ಎಂದು ಗುರುತಿಸಲಾಯಿತು. ಸದರಿ ಪ್ರಕರಣಕ್ಕೆ ಸಂಬಂದಿಸಿದಂತೆ ಮುದ್ದೆಮಾಲನ್ನು ನೋಡಿ ಗುರುತಿಸುತ್ತೇನೆ. ಸದರಿ ಮುದ್ದೆಮಾಲನ್ನು ಗುರುತಿಸಲು ಆರೋಪಿ ಪರ ವಕೀಲರು ತಕರಾರು ಮಾಡಿರುತ್ತಾರೆ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿತನನ್ನು ನೋಡಿ ಗುರುತಿಸುತ್ತೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **A G G.**ವಕೀಲರಿಂದಃ

ಮುಮಾ1 ರಲ್ಲಿ 2012 ಎಂದು ನಮೂದಾಗಿರುತ್ತದೆ ಎಂದರೆ ಸರಿ. ಮುಮಾ1 ರ ಮೇಲೆ ಚಂದ್ರಕಾಂತ ಚುನಾರ ಇವರ ತಾಬಾದಲ್ಲಿದ್ದ ಸಾರಾಯಿ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಅದರ ಕೆಳಗೆ ಇರುವ ಸಹಿ ನನ್ನದಲ್ಲ ಎಂದರೆ ಸರಿ. ಸದರಿ ಮು.ಮಾಲಿನ ಮೇಲೆ ಸಿಹೆಚಸಿ ಬಕಲ್ ನಂಬರ 553 ಎಂದು ಯಾರದ್ದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಸದರಿ ಮುದ್ದೆಮಾಲಿನ ಬಾಟಲಿ ಬದಲಾವಣೆ ಆಗಿದೆ ಎಂದು ನುಡಿಯುತ್ತಾರೆ. ಆದಕಾರಣ ಮುಮಾ1 ಆರೋಪಿತನ ಬಳಿ ಇದ್ದ ಜಪ್ತಿ ಮಾಡಿದ ಬಾಟಲಿ ಅಲ್ಲ ಎಂದರೆ ಸರಿ. ಮುಮಾ1 ನ್ನು ನಾನು ಜಪ್ತಿ ಮಾಡಿಲ್ಲ. ಸಾಕ್ಷಿ ಮುಂದುವರೆದು ಬೇರೆ ಪ್ರಕರಣದಲ್ಲಿದ್ದಂತಹ ಮುದ್ದೆಮಾಲನ್ನು ಪ್ರಾಯಶಃ ಪ್ರಸ್ತುತ ಪ್ರಕರಣದಲ್ಲಿ ಹಾಜರು ಪಡಿಸಿರುತ್ತಾರೆ. ನಿಪಿ-1 ರ ಪಂಚನಾಮೆ ನಾನೇ ಬರೆದಿರುತ್ತೇನೆ. ಪಂಚನಾಮೆಯಲ್ಲಿ ಮೊದಲು 9 ಸಾಲುಗಳನ್ನು ಪಂಚರೇ ಹೇಳಿ ಬರೆಸಿರುವಂತೆ ತೋರಿಸಿರುತ್ತದೆ ಎಂದರೆ ಸರಿ. ಸದರಿ ಪಂಚನಾಮೆಯಲ್ಲಿ ನಮ್ಮ ಸಿಬ್ಬಂದಿಯವರು ಎಂದು ಸಂಬೋದಿಸಿದ ವ್ಯಕ್ತಿಗಳು ನಮ್ಮ ಸಿಬ್ಬಂದಿ ವರ್ಗದವರು ಎಂದರೆ ಸರಿ ಅಲ್ಲ. ಸದರಿ ಪಂಚನಾಮೆಯಲ್ಲಿ ಸಿಬ್ಬಂದಿ ವರ್ಗದವರು ಎಂದು ನಮೂದು ಮಾಡಬೇಕಾದ ಸ್ಥಳದಲ್ಲಿ ಪಂಚರು ಎಂದು ನಮೂದು ಮಾಡಿರುತ್ತೇವೆ ಎಂದರೆ ಅದು ತಪ್ಪಾಗಿದೆ ಎಂದು ನುಡಿಯುತ್ತಾರೆ. ನಾನು ಕೆಲಸ ಮಾಡುತ್ತಿದ್ದ ವೇಳೆಯಲ್ಲಿ ಚಾಸಾ-1, 2 ರವರು ನಮ್ಮ ಠಾಣಾ ಖಾಯಂ ಪಂಚರಾಗಿದ್ದರು ಎಂದರೆ ಸರಿಯಲ್ಲ. ನಾನು ಕರ್ತವ್ಯ ಮಾಡುತಿದ್ದ ಸುಮಾರು 100 ಪ್ರಕರಣಗಳಲ್ಲಿ

ಚಾಸಾ-1, 2 ರವರು ನಮ್ಮ ಠಾಣಾ ಖಾಯಂ ಪಂಚರಾಗಿದ್ದರು ಎಂದರೆ ಗೊತ್ತಿಲ್ಲ. ಸದರಿ ಸಾರಾಯಿ ಬಾಟಲಿಯಲ್ಲಿ ಸೀಲು ಮಾಡಿದ ನಂತರ ಅದು ಎಲ್ಲಿಯೂ ಹೋಗುವುದಿಲ್ಲ ಎಂದರೆ ಸಾಕ್ಷಿ ಅದು ಚೆಲ್ಲಿ ಹೋಗಿರುತ್ತದೆ ಎಂದು ನುಡಿಯುತ್ತಾರೆ. ರಾಸಾಯನಿಕ ಪರೀಕ್ಷೆಗೆ ನೀಡಿದ ನಂತರ ಬಾಟಲಿಯಲ್ಲಿ 30 ಎಮಎಲನಷ್ಟು ಸಾರಾಯಿ ಉಳಿದಿತ್ತು. ಮಾನ್ಯ ನ್ಯಾಯಾಲಯದಿಂದ ಅನುಮತಿ ಪಡೆದ ನಂತರ ತೊಂದರೆ ಇತ್ತಾ ಎಂದರೆ ಸಾಕ್ಷಿ ಬಾತ್ಮಿ ಬಂದ ನಂತರ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಘಟನಾ ಸ್ಥಳಕ್ಕ ಹೊಗುವಾಗ ನ್ಯಾಯಾಲಯದ ಮುಂದೆ ಹಾದು ಹೊಗಬೇಕೆಂದರೆ ಸರಿ. ಘಟನಾ ಸ್ಥಳಕ್ಕ 5 ಜನರು ಹೋಗಿದ್ದೆವು. ಸರ್ಕಾರಿ ವಾಹನದ ಚಾಲಕನ ಹೇಳಿಕೆ ಪಡೆದಿರುವುದಿಲ್ಲ. ಆರೋಪಿತನು 2010 ರಿಂದ ಪರಿಚಯ ಇರುತ್ತಾರೆ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿತನ ಮನೆಗೆ ಹೋಗಿಬರುತ್ತಿದ್ದೆ ಆ ರೀತಿ ಅವರ ಪರಿಚಯ ಇದೆ ಎಂದರೆ ಸರಿಯಲ್ಲ. ನಾವು ನಮ್ಮ ಇಲಾಖೆಯಲ್ಲಿ ವರ್ಷಕ್ಕೆ ಇಂತಿಷ್ಟು ಪ್ರಕರಣಗಳು ದಾಖಲು ಮಾಡಬೇಕಾಗುತ್ತದೆ ಎಂದರೆ ಸರಿಯಲ್ಲ. ಆರೋಪಿತ ಶೇತ್ಕೀ ಮಾಡುತ್ತಿದ್ದರೂ ಸಹ ಆತನ ವಿರುದ್ಧ ಖೊಟ್ಟಿ ಪಿರ್ಯಾದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರುವುದಿಲ್ಲ, ಠಾಣೆಯಲ್ಲಿ ಕುಳಿತು ಖೊಟ್ಟಿ ಪಿರ್ಯಾದಿ ಸಲ್ಲಿಸಿರುತ್ತೇನೆ ಮತ್ತು ಅದಕ್ಕೆ ಅನೂಕೂವಾಗುವಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಮ್.ಎಫ್.ಸಿ.ನ್ಯಾಯಾಲಯ, ಅಥಣಿ.